ಶ್ರೀ ಜೆ. ಪುಟ್ಟಸ್ವಾಮಿಗೌಡ.— ಅಧ್ಯಕ್ಷರೇ, ಎರಡನೇ ಹಂತದ ಹಿರೇಹೊನ್ನಿಹಳ್ಳಿ ಏತ ನೀರಾವರಿ ಯೋಜನೆಯ ಮೂಲ ಬೇಡ್ತಿ ನಾಲಾ ಇದ್ದು, ನೀರಿನ ಲಭ್ಯತೆ ಅತ್ಯಲ್ಪವಾದ್ದರಿಂದ ಮತ್ತು ಎರಡು ಬೆಳೆಗೆ ನೀರು ಸಿಗದೆ ಇರುವುದರಿಂದ ನಬಾರ್ಡ್‌ನಿಂದ ಇದಕ್ಕೆ ಸಾಲ ಸಿಗುವುದಿಲ್ಲವೆಂಬ ಅಭಿಪ್ರಾಯಕ್ಕೆ ನಮ್ಮ ಇಲಾಖೆಯವರು ಬಂದಿದ್ದಾರೆ. ಆದರೂ ಕೂಡ ಇತ್ತೀಚೆಗೆ ತಾವುಗಳೆಲ್ಲಾ ಒತ್ತಾಯ ಮಾಡಿದ್ದರ ಮೇಲೆ ನಬಾರ್ಡ್‌ನ ಸೂತ್ರಗಳಿಗನುಗುಣವಾಗಿ ಅದನ್ನು ರೀ-ಆ್ಯಸ್ಸ್ ಮಾಡಿ ಈ ಪ್ರಾಜೆಕ್ಟ್ ಅನ್ನು ತಯಾರು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಕುರ್ಡಿಕೇರಿ ಏತ ನೀರಾವರಿ ಯೋಜನೆಯು ಕೃಷ್ಣಾ ಜಲಾನಯಕ್ಕೆ ಬರುತ್ತದೆಂದು ಹೇಳಿಲ್ಲ. ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ಇದನ್ನು ಪರಿಶೀಲಿಸುತ್ತಿದೆ. ಆ ದಿಸೆಯಲ್ಲಿ ಪ್ರಯತ್ನ ನಡೆಯುತ್ತದೆ ಎಂದು ಹೇಳಿದ್ದೇನೆ. ಅದಕ್ಕೆ ಕೂಡ ಫೀಸಬಲಿಟಿ ನೋಡುವುದಕ್ಕೆ ಸರಕಾರದ ವತಿಯಿಂದ ಆದೇಶ ಕೊಟ್ಟಿದ್ದೇವೆ. ಬಿಜಾಪುರದ ಎಂ.ಡಿ.ಯವರಿಗೆ ಇದನ್ನು ಪರಿಶೀಲಿಸಿ ವರದಿ ಕಳಿಸಿ ಎಂದು ಹೇಳಿದ್ದೇವೆ. ವರದಿ ಬಂದ ನಂತರ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಪಿ. ಸಿ. ಸಿದ್ದನಗೌಡರ್.— ಈ ಎರಡನ್ನೂ ಮಾಡಬೇಕಾದರೆ ರೈತರು ಏನಾದರೂ ಕಾಂಟ್ರಿಬ್ಯೂಷನ್‌ನ್ನು ಕೊಡಬೇಕೋ ಅಥವಾ ಸಂಪೂರ್ಣವಾಗಿ ನೀವೇ ನಬಾರ್ಡ್ ಮೂಲಕ ಅಥವಾ ಲಿಫ್ಟ್ ಇರಿಗೇಷನ್ ಸ್ಕೀಂನಲ್ಲೇ ಮಾಡುತ್ತೀರೋ?

ಶ್ರೀ ಜೆ. ಪುಟ್ಟಸ್ವಾಮಿಗೌಡ.— ಈ ಯೋಜನೆಗಳು ಮೊದಲು ಸಾದುವೆ, ಆಸಾದುವೇ ಎಂಬುದನ್ನು ಮೊದಲು ನಿರ್ಣಯ ಮಾಡಬೇಕು. ಟೆಕ್ನಿಕಲ್ ಕಮಿಟಿಯವರು ಸಾದು ಎಂದು ಹೇಳಿದರೆ ಅನಂತರ ಇದನ್ನು ಯಾವ ರೀತಿ ಕೈಗೊಳ್ಳಬೇಕೆಂದು ನಿರ್ಧಾರ ಮಾಡಬೇಕಾಗುತ್ತದೆ. ನಾನು ಈಗಾಗಲೇ ಹೇಳಿದಂತೆ ನಮ್ಮ ಸಮಿತಿಯವರು ಇದರ ಸಾಧ್ಯಾಸಾಧ್ಯತೆಗಳನ್ನು ಮೊದಲು ತೀರ್ಮಾನ ಮಾಡಬೇಕಾಗುತ್ತದೆ. ಅನಂತರ ನಾವು ಇದನ್ನು ಯಾವ ರೀತಿ ಮಾಡುತ್ತೇವೆಂಬುದನ್ನು ನಾನು ತಮಗೆ ತಿಳಿಸುತ್ತೇನೆ.

ಶ್ರೀ ಬಸಪ್ಪ ಎಚ್. ಬನ್ನೀಕೊಡ್.— ಏತ ನೀರಾವರಿ ಯೋಜನೆಗೆ ರೈತರು ೧೫ ಪರ್ಸೆಂಟ್ ವಂತಿಗೆ ಎಂದು ಕಾನೂನು ಇದ್ದರೆ ಅದನ್ನು ಬದಲಾವಣೆ ಮಾಡಿ ಸರ್ಕಾರದವರೇ ಅದನ್ನು ಭರಿಸುತ್ತೀರೋ ಎಂಬುದನ್ನು ತಾವು ತಿಳಿಸಬೇಕು?

ಶ್ರೀ ಜೆ. ಪುಟ್ಟಸ್ವಾಮಿಗೌಡ.— ಆ ಚಿಂತನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಅನೌಪಚಾರಿಕ ಪಡಿತರ ಪಟ್ಟಣಗಳ ಸಂಖ್ಯೆ

ಟಿ.ಕೆ ಳಿ ಶ್ರೀ ಪಿ. ಜಿ. ಆರ್. ಸಿಂಧ್ಯ.— ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) ಅವರ ಪರವಾಗಿ ೨೬೨ (ಟಿ.ಕೆ ಳಿ) ಪ್ರಶ್ನೆ ಕೇಳುತ್ತೇನೆ. ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ. —

ಅ) ರಾಜ್ಯದ ಎಷ್ಟು ಪಟ್ಟಣಗಳಲ್ಲಿ ಅನೌಪಚಾರಿಕ ಪಡಿತರ ಪದ್ಧತಿಯ ಮೂಲಕ ಆಹಾರವನ್ನು ಒದಗಿಸಲಾಗುತ್ತಿದೆ?

ಆ) ಇದನ್ನು ರಾಜ್ಯದ ಇತರೆ ಪಟ್ಟಣಗಳಿಗೆ ವಿಸ್ತರಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಆಜೀಜ್‌ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಳಿ.

ಆ) ೧೯೮೧ನೇ ಸಾಲಿನ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಳಿ ಸಾವಿರಕ್ಕಿಂತಲೂ ಹೆಚ್ಚಿಗೆ ಜನಸಂಖ್ಯೆ ಇರುವ ಎಲ್ಲಾ ಳಿ ಪಟ್ಟಣಗಳನ್ನು ಅನೌಪಚಾರಿಕ ಪಡಿತರ ಪದ್ಧತಿಗೆ ಒಳಪಡಿಸಲಾಗಿದೆ. ೧೯೯೧ನೇ ಸಾಲಿನ ಜನಗಣತಿಯ ನಂತರ ಆಂಕಿ ಸಂಖ್ಯೆಯ ಆಧಾರದ ಮೇಲೆ ಳಿ ಸಾವಿರಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರುವ ಪ್ರತಿ ಪಟ್ಟಣಗಳ ವಾಹಿತಿಗಳನ್ನು ಪಡೆದು ಕೇಂದ್ರ ಸರ್ಕಾರದಿಂದ ಹಂಚಿಕೆಯಾಗುವ ಅಕ್ಕಿ ಮತ್ತು ಗೋಧಿಯ ಪ್ರಮಾಣವನ್ನನುಸರಿಸಿ, ಈ ಸೌಲಭ್ಯವನ್ನು ಇಂತಹ ಇತರೆ ಪಟ್ಟಣಗಳಿಗೆ ವಿಸ್ತರಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರತಕ್ಕ ಳಿ ಪಟ್ಟಣಗಳಿಗೆ ೧೯೮೧ರ ಸೆನ್ಸಸ್ ಪ್ರಕಾರ ಳಿ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕ ಪಟ್ಟಣಗಳಿಗೆ ಇನ್‌ಫಾರ್ಮಲ್

ರೇಷನಿಂಗ್‌ನ್ನು ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ೧೯೮೧ರ ಸೆನ್ಸಸ್ ಆದಮೇಲೆ ಬಹಳಷ್ಟು ಪಟ್ಟಣಗಳಲ್ಲಿ ೪೦ ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಆಗಿದೆ. ಈಗ ಅವರು ತೊಂದರೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ೧೯೯೧ ರವರೆಗೆ ನಾವು ಕಾಯುತ್ತೇವೆ ಮತ್ತು ಕೇಂದ್ರ ಸರ್ಕಾರ ಕೊಡತಕ್ಕ ಆಹಾರಪದಾರ್ಥಗಳ ಕ್ವಾಂಟಿಟಿಯಮೇಲೆ ಇದು ಡಿಪೆಂಡ್ ಆಗುತ್ತದೆಂಬ ವಾದವನ್ನೇ ನಾವು ಮುಂದು ಪರಿಸಿಕೊಂಡು ಹೋದರೆ ಕಷ್ಟವಾಗುತ್ತದೆ. ಬಹುಶಃ ಅವರು ಈ ಕ್ವಾಂಟಿಟಿಯನ್ನು ಹೆಚ್ಚಿಸದೇ ಹೋಗ ಬಹುದು. ಹಿಂದೆ ನಮ್ಮ ಸರ್ಕಾರ ಇದ್ದಾಗಲೇ ಈ ಇನ್‌ಫಾರ್ಮಲ್ ರೇಷನಿಂಗ್‌ನ್ನು ೨೦ ಸಾವಿರ ಜನ ಸಂಖ್ಯೆ ಇರತಕ್ಕ ಪಟ್ಟಣಗಳಿಗೂ ವಿಸ್ತರಣೆ ಮಾಡಬೇಕೆಂದು ಯೋಚನೆ ಮಾಡಿದ್ದೆವು. ಆ ರೀತಿಯ ಯೋಜನೆ ಈಗ ನಿಮ್ಮ ಸರ್ಕಾರದಲ್ಲಿ ಏನಾದರೂ ಇದೆಯೇ ಎಂದು ಕೇಳಬಯಸುತ್ತೇನೆ.

SRI AZIZ SAIT.—The difficulty is the question of supplies from Central Government. Our rationing is dependent on the extent of supply we get from Government of India. You will very much appreciate that according to the recent survey towns having more than a population of 40,000 are already brought under informal rationing area. There are 45 towns having population between 21,000 and 40,000 as per the 1981 census. They have to be covered under informal rationing area. They are urban in nature. But the difficulty is supply. This is the main hurdle we are having today.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಕೇಂದ್ರ ಸರ್ಕಾರದವರು ಇನ್ನೂ ೧೦ ವರ್ಷ ಈ ಫುಡ್ ಕ್ವಾಂಟಿಟಿಯನ್ನು ಜಾಸ್ತಿಮಾಡದೇಹೋದರೆ ನೀವು ಬೇರೆ ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೇ ? ಈಗ ೨೧ ಸಾವಿರದಿಂದ ೪೦ ಸಾವಿರದೊಳಗಿರುವ ಜನಸಂಖ್ಯೆಯ ಪಟ್ಟಣಗಳು ಳ್ಳಿಕ್ಕೂ ಹೆಚ್ಚು ಇವೆಯೆಂದು ನೀವೇ ಉತ್ತರವನ್ನು ಕೊಟ್ಟಿದ್ದೀರಿ. ಆ ಜನರು ಏನು ಮಾಡಬೇಕು. ? ಇದರಲ್ಲಿ ರಾಜ್ಯಸರ್ಕಾರಕ್ಕೆ ಹಣದ ವಿಚಾರದಲ್ಲಿ ಸ್ವಲ್ಪವಾಟ್ಟಿಗೆ ಬರ್ಡನ್ ಆದರೂ ಪರವಾಗಿಲ್ಲ, ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ರೈತರು ರಾಗಿ, ಜೋಳವನ್ನು ಬೆಳೆಯುತ್ತಾರೆ, ನೀವು ಹಸಿರು ಕಾರ್ಡ್‌ನಲ್ಲಿ ಬಡವರಿಗೆ ಅಕ್ಕಿಯನ್ನು ಕೊಡುತ್ತಿದ್ದೀರಿ. ಇವರದೂ ಪರವಾಗಿಲ್ಲ, ೪೦ ಸಾವಿರಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇರತಕ್ಕ ಪಟ್ಟಣಗಳವರಿಗೂ ತೊಂದರೆ ಏನು ಇಲ್ಲ. ಆದರೆ ೨೧ ಸಾವಿರದಿಂದ ೪೦ ಸಾವಿರದೊಳಗೆ ಜನಸಂಖ್ಯೆ ಇರತಕ್ಕ ಪಟ್ಟಣದ ಜನರಿಗೆ ಬಹಳ ತೊಂದರೆಯಾಗುತ್ತಿದೆ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ? ಬಂದಿದ್ದರೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ?

SRI AZIZ SAIT.—I am quite aware of the difficulties expressed by the hon. member. But there are two ways of considering this. we have to ask some structure of the affluent society like right from the Chief Minister to all MLAs, right from IAS to KAS, big business house people and people paying income tax to be removed from the purview of this informal rationing and distribute it to the needly poor people. If all of you agree then we can consider. As far as supply is concerned.....

SRI P.G.R. SINDHIA.—You please come with such a proposal to this House. Let us examine it.

SRI AZIZ SAIT:—No question of examining it. It is a question of sacrifice on the part of the affluent society of the population.

ಶ್ರೀ ಕೆ.ಹೆಚ್. ಹನುಮೇಗೌಡ.—ಕೇರಳ, ತಮಿಳ್ನಾಡು ಮತ್ತು ಆಂಧ್ರಪ್ರದೇಶಕ್ಕೆ ಕೇಂದ್ರ ಸರ್ಕಾರದವರು ಇತ್ತೀಚೆಗೆ ಕೊಡತಕ್ಕ ಕೋಟಾವನ್ನು ಜಾಸ್ತಿ ಮಾಡಿರುವಾಗ ಕರ್ನಾಟಕಕ್ಕೆ ಜಾಸ್ತಿ ಮಾಡದಿರಲು ಕಾರಣವೇನು ? ನೀವು ಈ ಬಗ್ಗೆ ಏನಾದರೂ ಪ್ರಯತ್ನ ಮಾಡಿದ್ದೀರಾ ? ಅವರು ಕೇಳಿದ ಹಾಗೆ ನೀವೊ ಕೇಳಿದ್ದೀರಾ ? ಅವರಿಗೆ ಕೊಟ್ಟು ನಿಮಗೆ ಕೊಡದೆ ಇರಲು ಕಾರಣವೇನು ?

SRI AZIZ SAIT.—The answer lies in the question itself. We have also tried with the Government of India and somehow I feel the Government of India are not very kind towards us.

ಶ್ರೀ ಕೆ.ಹೆಚ್. ಪುಟ್ಟಸ್ವಾಮಿಗೌಡ.—ಕೇಂದ್ರ ಸರ್ಕಾರದವರು ದಾನಕ್ಕೆ ಏನಾದರೂ ಕೊಡುತ್ತಿದ್ದಾರೆಯೆ ? ಬೇರೆ ಕಡೆ ಕೊಟ್ಟು ಕರ್ನಾಟಕಕ್ಕೆ ಕೊಡುತ್ತಿಲ್ಲ. ಅವರಿಗೆ ಅಷ್ಟು ದಯೆ ಇಲ್ಲವೆಂದರೆ ನಾವೇನು ಬಿಕ್ಷೆ ಕೇಳುತ್ತಿದ್ದೇವೆಯೇ ? ಇಲ್ಲಿನ ಜನರು ಏನು ಮಾಡಬೇಕು ? ಕೇಂದ್ರ ಸರ್ಕಾರದವರು ಎಲ್ಲರಿಗೂ ಒಂದೇ ನೀತಿಯನ್ನು ಅನುಸರಿಸಬೇಕು. ಕೇರಳ ಮತ್ತು ತಮಿಳ್ನಾಡಿಗೆ ಕೊಟ್ಟು ಇಲ್ಲಿಗೆ ಕೊಡಲಿಲ್ಲವೆಂದರೆ ನಾವೇನು ಬಿಕ್ಷೆ ಕೇಳುತ್ತಿದ್ದೇವೆಯೆ ? ನೀವು ಒತ್ತಾಯ ಮಾಡಬೇಕು. ಯಾವುದೇ ಹೋರಾಟಕ್ಕೆ ಸದನ ಮತ್ತು ಜನ ತಯಾರಿದ್ದಾರೆ.

ಶ್ರೀ ಅಜೀಜ್ ಸೇಟ್.—ದಯೆ ತೋರಿಸುವ ಪ್ರಶ್ನೆ ಇಲ್ಲ. ರಾಜಕೀಯ ಒಳಗಡೆ ಬಂದಿದೆ ಎಂದು ಕಾಣುತ್ತದೆ.

ಕೆ.ಆರ್.ಎಸ್. ಅಚ್ಚುಕಟ್ಟು ಪ್ರದೇಶದ ರೈತರ ತೊಂದರೆ ಚುಕ್ಕೆ ಗುರುತಿನ ಪ್ರಶ್ನೆ ೨೬೩. (೫೧೭)

ಶ್ರೀ ಕೆ.ಎಂ. ಪುಟ್ಟು (ಕಿರುಗಾವಲು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೆ.ಆರ್.ಎಸ್.ನ ಮೂಲ ಅಚ್ಚುಕಟ್ಟು ಪ್ರದೇಶದ ರೈತರುಗಳು ನೀರಿಲ್ಲದೆ ಭವಣೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ವಿಶ್ವೇಶ್ವರಯ್ಯ ನಾಲೆಯ ಕಾವೇರಿ ಶಾಖೆಯಲ್ಲಿ ಎಷ್ಟು ಪಂಪುಸೆಟ್ಟುಗಳಿವೆ ?

ಇ) ಈ ಪಂಪುಸೆಟ್ಟುಗಳು ಭೂಗರ್ಭ ನೀರಿನಿಂದ ನಡೆಯುತ್ತಿವೆಯೆ ಅಥವಾ ಸೈಫನ್ ಅಳವಡಿಸಿಕೊಂಡು ನಡೆಯುತ್ತಿವೆಯೆ ?

ಈ) ಇದರಿಂದ ಮೂಲ ರೈತರಿಗೆ ತೊಂದರೆಯಾಗಿರುವುದು ನಿಜವಲ್ಲವೆ ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ೧೯೯ ಪಂಪುಸೆಟ್ಟುಗಳಿವೆ.

ಇ) ಹಲವು ನಾಲೆಯಿಂದ ನೇರವಾಗಿ ಹಲವು ಪ್ರಕರಣಗಳಲ್ಲಿ ನಾಲೆಗೆ ಪೈಪ್ ಅಳವಡಿಸಿ ಸೈಫನ್ ಮೂಲಕ ಹಾಗೂ ಹಲವೆಡೆ ನಾಲೆಯ ಸಮೀಪದಲ್ಲಿರುವ ಬಾವಿಯ ಮೂಲಕ ಪಂಪುಸೆಟ್ ಅಳವಡಿಸಿ ನೀರನ್ನು ಸೆಳೆಯುತ್ತಿವೆ.

ಈ) ನಿಜ.

ಉ) ಅನಧಿಕೃತ ಪಂಪುಸೆಟ್ಟುಗಳನ್ನು ತೆಗೆದುಹಾಕುವ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ. ಎಂ. ಪುಟ್ಟು.—ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಕಾವೇರಿ ಮತ್ತು ಅದರ ಮುಂದೆ ಹರಿಯುವ ತಿರಪಮೂರು ನಿಡಘಟ್ಟ ಮತ್ತು ಮದ್ದೂರು ಈ ಬ್ರಾಂಚ್‌ಗಳಲ್ಲಿ ೧೨೦೦ ಕ್ಕೂ ಮೇಲ್ಪಟ್ಟು ಪಂಪುಸೆಟ್ಟುಗಳಿವೆ. ಆದರೆ ಉತ್ತರದಲ್ಲಿ ೧೯೯ ಎಂದು ಕೊಟ್ಟಿದ್ದಾರೆ. ಕಾವೇರಿಯ ಬ್ರಾಂಚ್‌ನಲ್ಲಿ ಸಹ ೩೦೦-೪೦೦ ಪಂಪ್‌ಸೆಟ್ಟುಗಳು ೫ ಹೆಚ್.ಪಿ.ಯಿಂದ ೨೫ ಹೆಚ್. ಪಿ. ಶಕ್ತಿಯಿರುವ ಪಂಪುಸೆಟ್ಟುಗಳಿವೆ. ರೈತರಿಗೂ ಸರ್ಕಾರಕ್ಕೂ ತಕರಾರು ಆರ್ಜಿ ಹೈಕೋರ್ಟಿನಲ್ಲಿತ್ತು ಎಂದು ಕೇಳಿದ್ದೆ. ಅದು ಏನಾಯಿತೆಂದು ಗೊತ್ತಿಲ್ಲ. ಆದರೆ ಮಾನ್ಯ ಸಚಿವರು ಹೇಳುತ್ತಾರೆ. ನಾವು ಈಗಾಗಲೇ ಕ್ರಮ ಕೈಗೊಂಡಿದ್ದೇವೆ ಎಂದು. ಆದರೆ ಅವರು ಕ್ರಮ ಕೈಗೊಂಡಿಲ್ಲ. ಮೂರು ಇಲಾಖೆಗಳು ಏನಿವೆ, ವಿದ್ಯುಚ್ಛಕ್ತಿ, ಭೂಗರ್ಭ ಮತ್ತು ಲೋಕೋಪಯೋಗಿ ಇಲಾಖೆಗಳು ಇವು ಪ್ರತಿ ಪಂಪು ಸೆಟ್ಟಿಗೆ ೧೦ ಸಾವಿರ ರೂಪಾಯಿಗಳನ್ನು ವಸೂಲ್ಮಾಡಿ ಇಪ್ಪತ್ತಿಗೂ ಹೊಸ ಪಂಪುಸೆಟ್ಟುಗಳನ್ನು ಅಳವಡಿಸುತ್ತಿದ್ದಾರೆ. ಕಿತ್ತು ಹಾಕುತ್ತಿಲ್ಲ. ಆದರೆ ಮಾನ್ಯ ಸಚಿವರು ಕ್ರಮ ಕೈಗೊಂಡಿದ್ದೇವೆ, ತೆಗೆದುಹಾಕುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಅವರು ತೆಗೆದುಹಾಕುತ್ತಿಲ್ಲ. ಇವತ್ತಿಗೂ ಸಹ